## ಮಹಿಳೆಯರನ್ನು ಅತಿಯಾಗಿ ಬಾಧಿಸುವ

# ಎಂಡೋಮೆಟ್ರಿಯೋಸಿಸ್



ಗರ್ಭಕೋಶದ ಒಳಪದರದ ಅಥವಾ ಗೋಡೆಗೆ ವೈದ್ಯ ಭಾಷೆಯಲ್ಲಿ ಎಂಡೋಮೆಟ್ರಿಯಂ ಎಂದು ಕರೆಯುತ್ತಾರೆ. ಪ್ರತಿ ತಿಂಗಳು ನಿಗದಿತ ಸಮಯದಲ್ಲಿ ಎಂಡೋಮೆಟ್ರಿಯಂ ಗೋಡೆಯ ಪದರು ರಚನೆಗೊಳ್ಳುತ್ತದೆ.

ಎಂಡೋಮೆಟ್ರಿಯಂ ಗೋಡೆಯ ಪದರ ರಚನೆಗೊಂಡಾಗ ಅಲ್ಲಿ ಭ್ರೂಣ ಬಂದು ಸೇರದೇ ಇದ್ದಾಗ ದೇಹ ಎಂಡೋಮೆಟ್ರಿಯಂನ ಆ ಭಾಗವನ್ನು ಯೋನಿ ಮೂಲಕ ಹೊರಹಾಕುತ್ತದೆ. ಪ್ರತಿ ತಿಂಗಳು ತಪ್ಪದೇ ಉಂಟಾಗುವ ಈ ಕ್ರಿಯೆಯನ್ನು ಮುಟ್ಟು ಎಂದು ಹೇಳುತ್ತೇವೆ.

ಕೆಲವೊಮ್ಮೆ ರಕ್ತಸ್ರಾವ ಉಂಟಾಗಿ ಫೆಲೋಪಿಯನ್ ಟ್ಯೂಬ್‌ಗಳ ಮೂಲಕ ಹಿಮ್ಮುಖವಾಗಿ ಚಲಿಸಿ ಅಲ್ಲಿ ತೊಂದರೆಗೆ ಕಾರಣವಾಗುತ್ತದೆ. ಈ ತೊಂದರೆಯನ್ನೇ "ಎಂಡೋಮೆಟ್ರಿಯಸಿಸ್" ಎಂದು ಕರೆಯಲಾಗುತ್ತದೆ.

ಗರ್ಭಕೋಶದ ಹೊರಗಡೆ ಉಂಟಾದ ರಕ್ತಸ್ರಾವ ಅಲ್ಲಿಯೇ ಹೆಪ್ಪುಗಟ್ಟುತ್ತದೆ. ಮೊದಲು ಕೆಂಪು ವರ್ಣವಿದ್ದ ಟಿಶ್ಯೂಗಳು ಬಳಿಕ ಕಂದು ವರ್ಣ ತಾಳುತ್ತವೆ. ಇದನ್ನೇ ಚಾಕ್ಲೇಟ್ ಸಿಸ್ಟ್ ಎಂದು ಕರೆಯುತ್ತಾರೆ. ಇದು ಪ್ರಮುಖವಾಗಿ ಅಂಡಾಶಯದಲ್ಲಿ ಉಂಟಾಗುತ್ತದೆ.

ಚಾಕ್ಲೇಟ್ ಸಿಸ್ಟ್ ಬೇರೆ ಬೇರೆ ಅಂಗಗಳು ಪರಸ್ಪರ ಅಂಟಿಕೊಳ್ಳುವಂತಹ ಸ್ಥಿತಿಯನ್ನು ಉತ್ಪನ್ನ ಮಾಡುತ್ತದೆ. ಈ ಕಾರಣದಿಂದ ವಿಪರೀತ ನೋವು ಶುರುವಾಗುತ್ತದೆ.

### ಮುಖ್ಯ ಲಕ್ಷಣಗಳು

- ಮುಟ್ಟಿನ ಸಂದರ್ಭದಲ್ಲಿ ವಿಪರೀತ
- ಹೊಟ್ಟೆನೋವು ಉಂಟಾಗುತ್ತದೆ.
  ಕೆಲವರಿಗೆ ವಿಪರೀತ ರಕ್ತಸ್ರಾವ ಉಂಟಾಗುತ್ತದೆ.
- ಸಮಾಗಮದ ಸಂದರ್ಭದಲ್ಲೂ ಅತಿಯಾದ ನೋವು ಉಂಟಾಗುತ್ತದೆ.
- ಮುಟ್ಟಿನ ಸಂದರ್ಭದಲ್ಲಿ ಮಲವಿಸರ್ಜನೆ ಮಾಡುವಾಗ ನೋವು ಅನಿಸುತ್ತದೆ.
- ಶ್ವಾಸಕೋಶ ಭಾಗದಲ್ಲಿ ರಕ್ತಸ್ರಾವ ಆಗಿದ್ದರೆ, ಕೆಮ್ಮಿದಾಗ ಕಫದ ಜೊತೆ ರಕ್ತವೂ ಬರಬಹುದು.
- ಮೂತ್ರದಲ್ಲೂ ರಕ್ತ ಬರಬಹುದು.
- ಬಂಜೆತನಕ್ಕೂ ಇದು ಪ್ರಮುಖ ಕಾರಣ.

### ಪರೀಕ್ಷೆ ಹೇಗೆ?

ಸ್ಕ್ಯಾನ್ ಮಾಡುವುದರ ಮೂಲಕ ಎಂಡೊಮೆಟ್ರಿಯೊಸಿಸ್‌ನ ಸ್ಥಿತಿಗತಿಯನ್ನು ಸ್ಪಷ್ಟವಾಗಿ ತಿಳಿದುಕೊಳ್ಳಬಹುದು. ಲ್ಯಾಪ್ರೋಸ್ಕೋಪಿಯಿಂದ ಗರ್ಭಕೋಶ ಹಾಗೂ ಅಕ್ಕಪಕ್ಕದ ಅಂಗಗಳ ಸ್ಪಷ್ಟ ಚಿತ್ರಣ ದೊರೆಯುತ್ತದೆ. ಎಂಡೊಮೆಟ್ರಿಯೊಸಿಸ್ ಸಮಸ್ಯೆ ಇರುವ ಮಹಿಳೆಗೆ ಗರ್ಭಕೋಶದ ಹೊರಭಾಗದಲ್ಲಿ ರಕ್ತಸ್ರಾವ ಆಗಿರುತ್ತದೆ. ಅಂಡಾಣು ಮತ್ತು ವೀರ್ಯಾಣುವಿಗೆ ಮಿಲನಗೊಳ್ಳಲು ಅಲ್ಲಿ ಸೂಕ್ತ ಅವಕಾಶವೇ ಇರುವುದಿಲ್ಲ. ಹೀಗಾಗಿ ಗರ್ಭಧಾರಣೆ ಪ್ರಕ್ರಿಯೆಗೆ ಅಡ್ಡಿಯಾಗುತ್ತದೆ.

ಒಂದು ವೇಳೆ ಅಂಡಕೋಶದಲ್ಲಿ ರಕ್ತ ಹೆಪ್ಪುಗಟ್ಟಿದ್ದರೆ ಅಂಡಗಳ ಸಂಖ್ಯೆ ಹಾಗೂ ರಕ್ತ ಹೆಪ್ಪುಗಟ್ಟಿದ್ದರೆ ಹಾಗೂ ಅವುಗಳ ಗುಣಮಟ್ಟ ಭಾರಿ ಪ್ರಮಾಣದಲ್ಲಿ ಕುಸಿಯುತ್ತದೆ. ಎಂಡೊಮೆಟ್ರಿಯೊಸಿಸ್ ಸಮಸ್ಯೆ ಇರುವ ಮಹಿಳೆಯರು ಮಗು ಪಡೆಯುವ ಅಬಿಲಾಷೆ ಇದ್ದರೆ ತಡಮಾಡಬಾರದು. ತಡಮಾಡಿದರೆ ನಿರಾಸೆ ಉಂಟಾಗಬಹುದು.

### ಚಿಕಿತ್ಸೆ ಹೇಗೆ?

ಎಂಡೊಮೆಟ್ರಿಯೊಸಿಸ್ ಸಮಸ್ಯೆ ಇರುವ ಮಹಿಳೆಗೆ ಲ್ಯಾಪ್ರೋಸ್ಕೋಪಿಯೇ ಸೂಕ್ತ ಚಿಕಿತ್ಸೆ. ಒಂದಕ್ಕೊಂದು ಅಂಟಿಕೊಂಡಿರುವ ಅಂಗಗಗಳನ್ನು ಲ್ಯಾಪ್ರೋಸ್ಕೋಪಿಯಿಂದ ಬೇರ್ಪಡಿಸಲಾಗುತ್ತದೆ. ಟ್ಯೂಬ್ ಬ್ಲಾಕ್ ಆಗಿದ್ದರೆ ಅದನ್ನು ನಿವಾರಿಸಿ ಗರ್ಭಕೋಶದಲ್ಲಿ ಎಂಡೊಮೆಟ್ರಿಯೋಸಿಸ್ ಸ್ಪಾಟ್‌ಗಳಿದದರೆ, ಅವನ್ನು ಬರ್ನ್ ಮಾಡಲಾಗುತ್ತದೆ.

ಅಂಡಾಶಯದಲ್ಲಿ ಉಂಟಾಗಿರುವ ಚಾಕಲೇಟ್ ಸಿಸ್ಟ್‌ನ್ನು ತೆಗೆದು ಅಂಡಾಶಯವನ್ನು ಮರುಜೋಡಣೆ ಮಾಡಲಾಗುತ್ತದೆ. ಲ್ಯಾಪ್ರೊಸ್ಕೋಪಿ ಚಿಕಿತ್ಸೆಯಿಂದ ಮಹಿಳೆಗೆ ನೋವು ಕಡಿಮೆ ಆಗುತ್ತದೆ ಮತ್ತು ಬಂಜೆತನ ಇರುವ ಮಹಿಳೆಯರಲ್ಲಿ 60% ರಷ್ಟು ಮಹಿಳೆಯರು ಗರ್ಭಧರಿಸುತ್ತಾರೆ. ಲ್ಯಾಪ್ರೊಸ್ಕೋಪಿ ನಂತರ ರೋಗಿಗೆ 3–6 ತಿಂಗಳು Gnrhanologues ಚಿಕಿತ್ಸೆ ನೀಡಬೇಕು.

– ಡಾ|| ಬಿ. ರಮೇಶ್


**ಎಂಡೋಮೆಟ್ರಿಯೋಸಿಸ್‌ನ ಹೆಚ್ಚಿನ ಮಾಹಿತಿ ಮತ್ತು ಚಿಕಿತ್ಸೆಗಾಗಿ ಸಂಪರ್ಕಿಸಿ:**

**ಆಲ್ಟಿಯಸ್ ಹಾಸ್ಪಿಟಲ್**
( Unit of Dr. Ramesh Hospital)
**ಹೈಟೆಕ್ ಲ್ಯಾಪ್ರೋಸ್ಕೊಪಿ & ಗೈನೊಕಾಲಜಿ ಹಾಸ್ಪಿಟಲ್**

**ರಾಜಾಜಿನಗರ:**
ನಂ.6/63, 59ನೇ ಅಡ್ಡರಸ್ತೆ, 4ನೇ ಬ್ಲಾಕ್,
ರಾಜಾಜಿನಗರ ಎಂಟ್ರೆನ್ಸ್, ಎಂ.ಇ.ಐ. ಪಾಲಿಟೆಕ್ನಿಕ್ ಎದುರು,
ರಾಮಮಂದಿರ ಹತ್ತಿರ, ಬೆಂಗಳೂರು–10.
ಫೋ: 080-23151873 Mob: 9900031842

**ರಾಜರಾಜೇಶ್ವರಿನಗರ:**
ನಂ.915, 1ನೇ ಮಹಡಿ, ಧನುಷ್ ಪ್ಲಾಜಾ,
ಐಡಿಯಲ್ ಹೋಮ್ಸ್ ಟೌನ್‌ಷಿಪ್, ಗೋಪಾಲನ್‌ಮಾಲ್ ಹತ್ತಿರ,
ರಾಜರಾಜೇಶ್ವರಿನಗರ, ಬೆಂಗಳೂರು–98.
ಫೋ: 080-28606789 Mob: 9663311128

E-mail: endoram2006@yahoo.in, Website: www.laparoscopicsurgeries.com